# ಕರ್ನಾಟಕ ಸರ್ಕಾರದ ನಡವಳಿಗಳು.

ವಿಷಯ:-ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011ರ ಅಡಿಯಲ್ಲಿ ಸಕಾಲ ಮಂಡಳಿಯ ಆಡಳಿತಾಧಿಕಾರಿಯವರಿಗೆ ಲೆಕ್ಕಶೀರ್ಷಿಕೆ 2052-00-090-0-26-051 (ಯೋಜನೇತರ) ಅಡಿಯಲ್ಲಿ ಲಭ್ಯವಿರುವ ಅನುದಾನದಲ್ಲಿ ರೂ 3.00 ಕೋಟಿ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ

ಓದಲಾಗಿದೆ :

1. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 20 ಇಕಾಅ 2012, ದಿನಾಂಕ:06/03/2012.
2. ಸರ್ಕಾರದ ಆದೇಶ ಸಂಖ್ಯೆ:ಆಇ 341:ಆನಿ 2012, ಆರ್ಥಿಕ ಇಲಾಖೆ(ಎಫ್.ಆರ್), ದಿನಾಂಕ:23/052012.
3. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 128 ಇಕಾಅ 2012,ದಿನಾಂಕ:25/5/2012.
4. ಮಹಾಲೇಖಪಾಲರ ಪತ್ರ ಸಂಖ್ಯೆ:ಟಿಎಂ/ಸಿ/2012-13/46,ದಿನಾಂಕ 28/29/05/2012.
5. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 128 ಇಕಾಅ 2012,ದಿನಾಂಕ:31/5/2012, ದಿನಾಂಕ 07/02/2013
6. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 128 ಇಕಾಅ 2012,ದಿನಾಂಕ:30/1/2013.

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ದಿನಾಂಕ:06/03/2012ರ ಆದೇಶದಲ್ಲಿ ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮ 2011ನ್ನು ಅನುಷ್ಠಾನಗೊಳಿಸಲು ಮಿಷನ್ ಮೋಡ್‌ನಲ್ಲಿ ಸಕಾಲ ಮಂಡಳಿಯನ್ನು ರಚಿಸಲಾಗಿದೆ.

ಮೇಲೆ (2)ರಲ್ಲಿ ಓದಲಾದ ಸರ್ಕಾರದ ಆದೇಶ ಸಂಖ್ಯೆ:ಆಇ 341:ಆನಿ 2012, ಆರ್ಥಿಕ ಇಲಾಖೆ (ಎಫ್.ಆರ್), ದಿನಾಂಕ:23/05/2012 ರಂದು ಆರ್ಥಿಕ ಇಲಾಖೆಯು ಸಹಮತಿಯನ್ವಯ ಡಿಡಿಓ ಕೋಡ್ ಖಜಾನೆ ಇಲಾಖೆಯಿಂದ ಪಡೆಯಲಾಗಿದೆ.

ಮೇಲೆ (3) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ವರಪ್ರಸಾದ್ ರೆಡ್ಡಿ ಇವರನ್ನು ಲೆಕ್ಕಶೀರ್ಷಿಕೆ 2052-00-090-0-26-051 (ಯೋಜನೇತರ) ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಯನ್ನಾಗಿ ಆದೇಶ ಹೊರಡಿಸಲಾಗಿದೆ.

ಮೇಲೆ (4) ರಲ್ಲಿ ಓದಲಾದ ಮಹಾಲೇಖಪಾಲರ ಪತ್ರದಲ್ಲಿ ಆಡಳಿತಾಧಿಕಾರಿ ಸಕಾಲ ಮಿಷನ್, ಇವರನ್ನು ಹಣ ಸೆಳೆಯುವ ಮತ್ತು ಬಡವಾಡೆ ಅಧಿಕಾರಿಯಾಗಿ (ಡಿ.ಡಿ.ಓ) ದೃಢೀಕರಿಸಿರುತ್ತಾರೆ.

ಮೇಲೆ (5) ರಲ್ಲಿ ಓದಲಾದ ಸರ್ಕಾರದ ಆದೇಶದ ದಿನಾಂಕ:31/05/2012 ರಲ್ಲಿ ಸಕಾಲ ಮಂಡಳಿಯ ಅಧಿಕಾರಿ/ಸಿಬ್ಬಂದಿ/ಐ.ಟಿ./ನಿರ್ವಹಣಾ ಸಮಾಲೋಚಕರಿಗೆ ವೇತನ ಪಾವತಿಸಲು ಹಾಗೂ ಮಂಡಳಿಯ ದಿನನಿತ್ಯದ ಹಣಕಾಸಿನ ಎಲ್ಲಾ ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸಲು (imprest amount, call centres) ಇವುಗಳ ವೆಚ್ಚ ಭರಿಸಲು ಲೆಕ್ಕಶೀರ್ಷಿಕೆ 2052-00-090-0-26-051 (ಯೋಜನೇತರ) ಅಡಿಯಲ್ಲಿ ವ್ಯವಹರಿಸಲು ರೂ 150.00 ಲಕ್ಷವನ್ನು ಮತ್ತು 100.00 ಲಕ್ಷ ಒಟ್ಟು ಮೊತ್ತ 250.00 ಲಕ್ಷವನ್ನು ಆಡಳಿತಾಧಿಕಾರಿ, ಸಕಾಲ ಮಂಡಳಿ ಇವರು ಉಪಯೋಗಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ. ಈ ಮೊತ್ತದಲ್ಲಿ ಫೆಬ್ರವರಿ ಅಂತ್ಯಕ್ಕೆ ರೂ 193.14 ಲಕ್ಷಗಳು ಖರ್ಚಾಗಿದ್ದು ರೂ 56.85 ಲಕ್ಷಗಳು ಮಾತ್ರ ಬಾಕಿ ಉಳಿದಿರುತ್ತದೆ. 31ನೇ ಮಾರ್ಚ್ 2013 ರವರೆಗೆ ಸಕಾಲ ಮಂಡಳಿಯ ಕಾರ್ಯನಿರ್ವಹಣೆಗೆ ರೂ356.85 ಲಕ್ಷಗಳ ಅವಶ್ಯಕತೆ ಇರುತ್ತದೆ. ಆಡಳಿತಾಧಿಕಾರಿ

ಸಕಾಲ ಮಂಡಳಿ ಇವರು ಉಪಯೋಗಿಸಲು ಈ ಮೊತ್ತವನ್ನು ಬಿಡುಗಡೆಮಾಡಲು ಸರ್ಕಾರ ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ ಹೊರಡಿಸಿದೆ

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 128 ಇಕಾಅ 2012**
**ಬೆಂಗಳೂರು, ದಿನಾಂಕ: 01/03/2013**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011 ರಡಿಯಲ್ಲಿ ಸಕಾಲ ಮಂಡಳಿಯ ಅಧಿಕಾರಿ/ಸಿಬ್ಬಂದಿ/ಐ.ಟಿ./ನಿರ್ವಹಣಾ ಸಮಾಲೋಚಕರಿಗೆ ವೇತನ ಹಾಗೂ ಸಕಾಲ ಮಂಡಳಿಯ ದಿನನಿತ್ಯದ ಹಣಕಾಸಿನ ಎಲ್ಲಾ ಆಡಳಿತಾತ್ಮಕ ಕಾರ್ಯಗಳನ್ನು ನಿರ್ವಹಿಸಲು (imprest amount, ಸಕಾಲ ಮಂಡಳಿಯ ಅಧಿಕಾರಿ/ಸಿಬ್ಬಂದಿ ವೇತನ, Call centres ಗಳಲ್ಲಿ ಕಾರ್ಯ ನಿರ್ವಹಿಸುವ ಸಿಬ್ಬಂದಿಗಳ ವೇತನ, ದೂರವಾಣಿ ಬಿಲ್ಲುಗಳು, ಟಿ.ಎ, ಡಿ.ಎ., ಇತ್ಯಾಧಿ.,) ಇವುಗಳ ವೆಚ್ಚ ಭರಿಸಲು ಲೆಕ್ಕ ಶೀರ್ಷಿಕೆ 2052-00-090-0-26-051 (ಯೋಜನೇತರ) ಅಡಿಯಲ್ಲಿ ವ್ಯವಹರಿಸಲು ಈಗಾಗಲೇ ಬಾಕಿ ಇರುವ 56.85 ಲಕ್ಷಗಳ ಜೊತೆಗೆ ರೂ 300.00 ಲಕ್ಷಗಳ ಅನುದಾನವನ್ನು ಆಡಳಿತಾಧಿಕಾರಿ, ಸಕಾಲ ಮಂಡಳಿ ಸಿಆಸುಇ (ಆಸು) ಇವರು ಉಪಯೋಗಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ. ಸರ್ಕಾರದ ಕಾರ್ಯದರ್ಶಿ ಸಿಆಸುಇ (ಆಸು) ಹಾಗೂ ನಿರ್ದೇಶಕರು ಸಕಾಲ ಮಂಡಳಿರವರು ಮೇಲುರುಜು (Counter Sign) ಪ್ರಾಧಿಕಾರ ಅಧಿಕಾರಿಯಾಗಿರುತ್ತಾರೆ.

ಈ ಸಕಾಲ ಮಂಡಳಿಗೆ ಸಂಬಂಧಿಸಿದ ವೆಚ್ಚಗಳ ಲೆಕ್ಕ ಶೀರ್ಷಿಕೆ 2052-00-090-0-26-051 (ಯೋಜನೇತರ) ಕರ್ನಾಟಕ ನಾಗರೀಕ ಸೇವೆಗಳ ಖಾತರಿ ಅಧಿನಿಯಮ 2011 ಅನುಷ್ಠಾನದ ಅಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಆಇ 341:ಆನಿ 2012, ಆರ್ಥಿಕ ಇಲಾಖೆ (ಎಫ್.ಆರ್), ದಿನಾಂಕ:23/05/2012 ರಂತೆ ಆರ್ಥಿಕ ಇಲಾಖೆಯು ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸಿ.ಎ.ಗಾಯತ್ರಿ) 1/3/13
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಆಸು-ನಾಗರೀಕ ಸೇವೆಗಳು)

ಡಾ: ಗೀತಾ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

ಇವರಿಗೆ:

1. ಕರ್ನಾಟಕ ಮಹಾಲೇಖಪಾಲರು. (ಲೆಕ್ಕ ಮತ್ತು ಪರಿಶೋಧನೆ), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, (ಆಯವ್ಯಯ ಮತ್ತು ಸಂಪನ್ಮೂಲ), ಆರ್ಥಿಕ ಇಲಾಖೆ.
3. ಸರ್ಕಾದ ಪ್ರಧಾನ ಕಾರ್ಯದರ್ಶಿ. ಸಿಆಸುಇ (ಲೆಕ್ಕಪತ್ರ 1 ಮತ್ತು 2)
4. ನಿರ್ದೇಶಕರು, ಖಜಾನೆ ಇಲಾಖೆ. ಪೋಡಿಯಂ ಬ್ಲಾಕ್, ಡಾ:ಅಂಬೇಡ್ಕರ್ ವೀದಿ, ಬೆಂಗಳೂರು.
5. ಉಪ ನಿರ್ದೇಶಕರು, ಟಿ.ಎಸ್.ಎಂ.ಸಿ.ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
6. ಅಪರ ಮಿಷನ್ ನಿರ್ದೇಶಕರು. ಸಕಾಲ ಮಂಡಳಿ, ವಿಶ್ವೇಶ್ವರಯ್ಯ ಗೋಪುರ. 20ನೇ ಮಹಡಿ, ಬೆಂಗಳೂರು.
7. ಶ್ರೀ ವರಪ್ರಸಾದ್ ರೆಡ್ಡಿ, ಆಡಳಿತಾಧಿಕಾರಿ, ಸಕಾಲ ಮಂಡಳಿ,
8. ಹೆಚ್ಚುವರಿ ಪ್ರತಿಗಳು/ಶಾಖಾ ರಕ್ಷಾ ಕಡತ.

ಪ್ರತಿ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಶಾಖೆ, ಸಿಆಸುಇ(ಆಸು)